Os No. 3504/2007
PW 2

ಸಾಕ್ಷಿಯನ್ನು ಕರೆಸಿ ದಿನಾಂಕ : 18.03.2019 ರಂದು ಪ್ರಮಾಣೀಕರಿಸಲಾಯಿತು.

ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲು : ಪ್ರತಿವಾದಿ ಪರ ವಕೀಲರಿಂದ :

ನಿಪಿ 19 ರಲ್ಲಿ ಇರುವ ಮಲ್ಲಿಗೆ ಶಾಮಣ್ಣ ಮತ್ತು ಮಲ್ಲಿಗೆ ರಾಮಯ್ಯ ಯಾರು ಎಂದು ನನಗೆ ಗೊತ್ತಿಲ್ಲ. ನಿಪಿ 19 ರಲ್ಲಿ ಯಾರು ಖರೀದಿದಾರರು , ಮಾರಾಟಗಾರರು , ನಿವೇಶನ ಸಂಖ್ಯೆ , ಖಾತಾ ನಂಬರ್ ಓದಿ ಹೇಳಲು ಆಗುವುದಿಲ್ಲ. ನಿಪಿ 20 ರಲ್ಲಿ ಖರೀದಿದಾರರು ರಾಮಚಂದ್ರ ಇದ್ದಾರೆ . ಮಾರಾಟಗಾರರು ಮಲ್ಲಿಗೆ ಶಾಮಣ್ಣ ಮತ್ತು ಮಲ್ಲಿಗೆ ರಾಮಯ್ಯ ಇದ್ದಾರೆ . ಖಾತಾ ನಂಬರ್ 278 , ನಿವೇಶನ ಸಂಖ್ಯೆ ಓದಿ ಹೇಳಲು ಆಗುವುದಿಲ್ಲ. ನಿಪಿ 21 ರ 19.05.1994 ರಲ್ಲಿ ರತ್ನಮ್ಮರವರಿಗೆ ಪಾಪಯ್ಯರವರು ಮಾರಾಟ ಮಾಡಿದ್ದಾರೆ . ಮನೆ ಸಂಖ್ಯೆ 9 , ಅಸೆಸ್ ಮೆಂಟ್ 48 , ಖಾತಾ ನಂಬರ್ 325 ಆಗಿರುತ್ತದೆ . ನಿಪಿ 21 ರಲ್ಲಿ ನಮೂದು ಮಾಡಿದ ಚಕ್ಕುಬಂದಿಯ ಪ್ರಕಾರ ಮನೆ ಸಂಖ್ಯೆ ನಂಬರ್ 9 ನ್ನು ನಾನು ನೋಡಿದ್ದೆನೆ. ಮನೆ ಸಂಖ್ಯೆ 9 ರ ಎಲ್ಲಾ ದಾಖಲೆಗಳನ್ನು ನಾನು ನೋಡಿಲ್ಲ. ಬಿಡಿಎ ರವರಾಗಲೀ , ಸಿ ಎಂ ಸಿ ರವರಾಗಲೀ , ಕಾರ್ಪೋರೇಷನ್ ರವರಾಗಲೀ ಮಾಡಿರುವ ಲೇ ಔಟ್ ಪ್ಲಾನ್‌ನ್ನು ನಾನು ನೋಡಿಲ್ಲ. ಸರ್ವೆ ನಂಬರ್ 48 ರಲ್ಲಿ 1 ರಿಂದ 19 ನಿವೇಶನಗಳು ಆಗಿರುತ್ತವೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ನಿಪಿ 19 ರಿಂದ 21 ರಲ್ಲಿ ಸರ್ವೆ ನಂಬರ್ ನ್ನು ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು

ಮುಂದುವರೆದು ಅಸೆಸ್ ಮೆಂಟ್ ನಂಬರ್ ಇರುತ್ತದೆ ಎಂದು ಹೇಳುತ್ತಾರೆ. ನಿಪಿ 19 ರಿಂದ 21 ರ ದಾಖಲೆಗಳಿಗೆ ಸಂಬಂಧಪಟ್ಟಂತೆ ಅಸೆಸ್ ಮೆಂಟ್ ಎಕ್ಸ್ ಟ್ರಾಕ್ಟ್ ನ್ನು ನಾನು ನೋಡಿಲ್ಲ. ಪ್ರತಿವಾದಿಯರು ಸಲ್ಲಿಸಿದ ಲಿಖಿತ ಹೇಳಿಕೆಯನ್ನು ನಾನು ನೋಡಿದ್ದೆನೆ ಮತ್ತು ಓದಿ ತಿಳಿದುಕೊಂಡಿದ್ದೇನೆ. ಲಿಖಿತ ಹೇಳಿಕೆಯಲ್ಲಿ ಬರೆದಿರುವ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ. ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ಪಾಪಯ್ಯರವರು ದಿಃ 22.02.1996 ರಲ್ಲಿ ನಿಧನ ಹೊಂದಿದ್ದಾರೆ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮರಣ ಸಮರ್ಥನ ಪತ್ರವನ್ನು ನಾನು ನೋಡಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯರು ಹಾಜರುಪಡಿಸಿದ ಎಲ್ಲಾ ದಾಖಲೆಗಳನ್ನು ನಾನು ಪರಿಶೀಲಿಸಿಲ್ಲ. ಮರಣ ಸಮರ್ಥನ ಪತ್ರದಲ್ಲಿರುವವರು ಮಲ್ಲಿಗೆ ಪಾಪಯ್ಯ ಎಂದರೆ ನನಗೆ ಗೊತ್ತಿಲ್ಲ. ನಿಪಿ 22 ರ ಪ್ರಕಾರ ರಾಮಚಂದ್ರರೆಡ್ಡಿಯವರು ಮಲ್ಲಿಗೆ ಪಾಪಯ್ಯರವರ ಜಿಪಿಎ ಎಂದು ಹೇಳಿಕೊಂಡಿದ್ದಾರೆ. ನಿಪಿ 22 ರಲ್ಲಿ ನಿವೇಶನ ಸಂಖ್ಯೆ 11 , ಖಾತಾ ನಂಬರ್ 48 ಎಂದು ಇದ್ದು ಸರ್ವೆ ನಂಬರ್ 48 ಎಂದು ಇರುವುದಿಲ್ಲ. ನಿಪಿ 24 ರಲ್ಲಿ ಆಂಜನಪ್ಪರವರು ಮಲ್ಲಿಗೆ ಪಾಪಯ್ಯರವರ ಜಿಪಿಎ ಎಂದು ಹೇಳಿಕೊಂಡಿದ್ದಾರೆ. ನಿಪಿ 24 ರಲ್ಲಿ ಸರ್ವೆ ನಂಬರ್ ನಮೂದು ಮಾಡಿಲ್ಲ. ನಿಪಿ 25 ಲ್ಲಿ ಆಂಜನಪ್ಪರವರು ಮಲ್ಲಿಗೆ ಪಾಪಯ್ಯರವರ ಜಿಪಿಎ ಎಂದು

ಹೇಳಿಕೊಂಡಿದ್ದಾರೆ. ನಿಪಿ 25 ರಲ್ಲಿ ಸರ್ವೆ ನಂಬರ್ ನಮೂದು ಮಾಡಿಲ್ಲ. ಸಾಕ್ಷಿಯು ಮುಂದುವರೆದು ಖಾತಾ ನಂಬರ್ ಇರುತ್ತದೆ ಎಂದು ಹೇಳುತ್ತಾರೆ. ಖಾತಾ ಎಕ್ಸ್ ಟ್ರಾಕ್ಟ್ ನ್ನು ನಾನು ನೋಡಿದ್ದೆನೆ ಹಾಗೂ ಅದನ್ನು ಹಾಜರುಪಡಿಸಲು ಸಿದ್ದನಿದ್ದೇನೆ. ನಿಪಿ 26 ರಲ್ಲಿ ಮಾರಾಟಗಾರರು ಸುನಂದಮ್ಮ ಎಂದು ಇರುತ್ತದೆ. ಸದರಿ ದಾಖಲೆಯಲ್ಲಿ ಸರ್ವೆ ನಂಬರ್ ನಮೂದು ಮಾಡಿಲ್ಲ ಎಂದರೆ ಸರಿ. ಆದರೆ ಖಾತಾ ನಂಬರ್ 48 ಎಂದು ನಮೂದು ಮಾಡಿದ್ದಾರೆ ಎಂದರೆ ಸರಿ. ನಿಪಿ 27 ರಲ್ಲಿ ಮಾರಾಟಗಾರರು ವಿ ಎನ್ ಜನಾರ್ಧನ್ ಎಂದು ಇರುತ್ತದೆ. ಮಾರಾಟಗಾರರು ಪಾಪಯ್ಯ ಎಂದು ಇರುತ್ತದೆ. ಪಾಪಯ್ಯ ಮತ್ತು ಮಲ್ಲಿಗೆ ಪಾಪಯ್ಯರವರು ಒಬ್ಬರೇ ಆಗಿರುತ್ತಾರೆ. ನಿಪಿ 27 ರಲ್ಲಿ ಸರ್ವೆ ನಂಬರ್ ನಮೂದು ಇರುವುದಿಲ್ಲ. ನಿಪಿ 28 ರಲ್ಲಿ ಸರ್ವೆ ನಂಬರ್ ನಮೂದು ಮಾಡಿಲ್ಲ . ಸಾಕ್ಷಿಯು ಮುಂದುವರೆದು ಅಸೆಸ್ ಮೆಂಟ್ 48 ಎಂದು ಹೇಳುತ್ತಾರೆ. ನಿಪಿ 29 ರಲ್ಲಿ ಸರ್ವೆ ನಂಬರ್ ನಮೂದು ಮಾಡಿಲ್ಲ . ನಿಪಿ 30 ರಲ್ಲಿ ಸರ್ವೆ ನಂಬರ್ ನಮೂದು ಮಾಡಿಲ್ಲ . ನಿಪಿ 31 ರ ಪುಟ ಸಂಖ್ಯೆ 4 ರಲ್ಲಿ ಸರ್ವೆ ನಂಬರ್ ಇರುವುದಿಲ್ಲ ಸಾಕ್ಷಿಯು ಮುಂದುವರೆದು ನಿಪಿ 31 ರ ಎಲ್ಲಾ ದಾಖಲೆಗಳಲ್ಲಿ ಸರ್ವೆ ನಂಬರ್ ಇರುತ್ತದೆ. ನಿಪಿ 21 ರಲ್ಲಿ

Os No. 3504/2007
PW 2

ಬಂದಂತಹ ಆಸ್ತಿಯನ್ನು ನಿಪಿ 31 ರ ಪ್ರಕಾರ ಮಾರಾಟವಾಗಿದೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲವಕಾಶವನ್ನು ಕೋರಿದ್ದು ಸಮಯವನ್ನು ನೀಡಲಾಯಿತು.

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ನಾಗವೇಣಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .